

(10ನೇ ಪುಟದಿಂದ)

ಈ ಎಲೆಗಳಲ್ಲಿ ಕಂಡುಬರುವ ಬಣ್ಣಗಳ ಸಂಯೋಜನೆ ಹಾಗೂ ಎಲೆಗಳ ನಡುವೆ ಇರುವ ಗೆರೆಗಳೇ ಹೆಚ್ಚು ಆಕರ್ಷಣೆ.

ನಾಟಿ ಮಾಡುವ ವಿಧಾನ: ನೋಡಲು ಕೆಸುವಿನ ಎಲೆಯನ್ನು ಹೋಲುವ ಈ ಗಿಡಗಳು ತಂಪು ವಾತಾವರಣದಲ್ಲಿ ಬಹಳ ಸುಲಭವಾಗಿ ಗುಂಪುಗುಂಪಾಗಿ ಬೆಳೆಯುತ್ತವೆ. ಕುಂಡಗಳಲ್ಲಿ ಬೆಳೆಸಿ ನಿಮ್ಮ ಮನೆಯ ಮುಂಭಾಗದಲ್ಲಿ ಅಥವಾ ಗಾರ್ಡನ್‌ನಲ್ಲಿ ನೆರಳು ಬೀಳುವ ಕಡೆಗಳಲ್ಲಿ ಇಡಬೇಕು. ಈ ಗಿಡಗಳಿಗೆ ಶೇಕಡಾ 70 ರಷ್ಟು ನೆರಳು ಹಾಗೂ ಶೇ.30 ರಷ್ಟು ಬಿಸಿಲು ಸಾಕು.

ಕುಂಡಗಳಲ್ಲಿ 2:1 ರಂತೆ ಮರಳು, ಮಣ್ಣು ಹಾಗೂ ಎಲೆಗೊಬ್ಬರ ಹಾಕಿ ಬೆಳೆಸಬಹುದು. ಬುಡದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಬಿಸಿಲು ಹೆಚ್ಚಾದರೆ ಎಲೆಗಳು ಕರಟಿ ಬಣ್ಣ ಕಳೆದುಕೊಳ್ಳುತ್ತವೆ. ಒಂದು ಗಿಡ ನೆಟ್ಟರೆ ಸಾಕು, ಬುಡದಲ್ಲಿ ಸಣ್ಣಸಣ್ಣ ಪಿಳ್ಳೆಗಳು ಹುಟ್ಟಿಕೊಂಡು ಚೆನ್ನಾಗಿ ಬೆಳೆಯುತ್ತವೆ. ಸಣ್ಣಗಿಡಗಳಿಂದ ಅಥವಾ ಬುಡದ ಗಡ್ಡೆಗಳಿಂದ ಸಸ್ಯಾಭಿವೃದ್ಧಿ ಮಾಡಬಹುದು.

ಗೃಹಾಲಂಕಾರದ ಹೂದಾನಿಗಳಲ್ಲಿ ಇತರ ಹೂವುಗಳ ಜೊತೆ ಬಹಳ ಚೆನ್ನಾಗಿ ಹೊಂದಿಕೊಳ್ಳುವ ಏಂಜಲ್ ವಿಂಗ್ಸ್, ನೇರ ಬಿಸಿಲನ್ನು ಸಹಿಸುವುದಿಲ್ಲ. ಈ ಆಕರ್ಷಕ ಗಿಡಗಳು ನಿಮ್ಮ ಮನೆಯ ಅಂದವನ್ನು ಇನ್ನಷ್ಟು ಹೆಚ್ಚಿಸುತ್ತವೆ.

